ಕೆ. ಯಾಲಕ್ಕಿಗೌಡ
ನಿರ್ದೇಶಕರು, (ಪಂಚಾಯತ್ ರಾಜ್)
K. YALAKKI GOWDA
Director, (Panchayat Raj)

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

ಅ.ಸ.ಪತ್ರ.ಸಂಖ್ಯೆ: ಗ್ರಾಅಪ:628:ಗ್ರಾಪಂಅ:2015 ದಿನಾಂಕ: 14.08.2015

ಮಾನ್ಯರೇ,

ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಕಾರ್ಯಕ್ರಮಗಳು, ಸೇವೆಗಳು, ಹಾಗೂ ಇತರೆ ಜವಾಬ್ದಾರಿಗಳಿಗೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯತಿವಾರು, ತಾಲ್ಲೂಕು ಪಂಚಾಯತಿವಾರು, ಮತ್ತು ಜಿಲ್ಲಾ ಪಂಚಾಯತಿವಾರು, ಕಳೆದ 5 ವರ್ಷಗಳ ಮಾಹಿತಿಯನ್ನು ಕೋರಿ ಮಾನ್ಯ ಶಾಸಕರುಗಳು, ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಕೇಳುವ ಪ್ರಶ್ನೆಗಳಿಗೆ ಜಿಲ್ಲಾ ಪಂಚಾಯತ್‌ಗಳಿಂದ ನಿಗದಿತ ಸಮಯದೊಳಗೆ ಸರ್ಕಾರಕ್ಕೆ ಮಾಹಿತಿಬಾರದ ಕಾರಣ ಸದರಿ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರ ನೀಡಲು ಸಾಧ್ಯವಾಗುತ್ತಿಲ್ಲ.

ಕೆಲವೊಮ್ಮೆ ಇಂತಹ ಪ್ರಶ್ನೆಗಳಿಗೆ ಉತ್ತರ ನೀಡಲು ಹೆಚ್ಚುವರಿ ಕಾಲಾವಕಾಶ ಕೋರುವ ಪ್ರಸಂಗ ಉದ್ಭವವಾಗುತ್ತಿದೆ. ಆದರೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಇದಕ್ಕೆ ಒಪ್ಪುತ್ತಿಲ್ಲ. ನಿಗಧಿತ ಸಮಯದಲ್ಲಿ ಉತ್ತರ ದೊರೆಯದ ಕಾರಣ ಮಾನ್ಯ ಶಾಸಕರುಗಳು ಆಕ್ಷೇಪಣೆ ವ್ಯಕ್ತಪಡಿಸುತ್ತಿದ್ದು ಇದನ್ನು ಸಮರ್ಥಿಸಿಕೊಳ್ಳಲು ಸರ್ಕಾರಕ್ಕೆ ಸಾಧ್ಯವಾಗದ ಪರಿಸ್ಥಿತಿ ಉಂಟಾಗುತ್ತಿದೆ. ಈ ಅಂಶವನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ಗ್ರಾಮ ಪಂಚಾಯತಿಗಳಿಗೆ ಸಂಬಂಧಪಟ್ಟ ಎಲ್ಲಾ ಅಂಶಗಳ ಬಗ್ಗೆ 5 ವರ್ಷಗಳ ವಿವರವಾದ ಮಾಹಿತಿ ಸಿದ್ಧಪಡಿಸಿ ಇಟ್ಟುಕೊಳ್ಳುವಂತೆ ಹಾಗೂ ಇದನ್ನು **ಜಿಲ್ಲಾ ಪಂಚಾಯತ್ ಹಂತದಲ್ಲಿ ಹಾರ್ಡ್ ಕಾಪಿ ಮತ್ತು ಸಾಫ್ಟ್ ಕಾಪಿಗಳಲ್ಲಿ ಸಿದ್ಧಪಡಿಸಿ ಇಟ್ಟುಕೊಂಡು ಕೇಳಿದ ಕೂಡಲೆ ನೀಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಲು ಸೂಚಿಸಿರುತ್ತಾರೆ.**

ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿಗಳಿಗೆ ಸಂಬಂಧಪಟ್ಟಂತೆ ಪ್ರಮುಖವಾಗಿ ಈ ಕೆಳಕಂಡ ಕಾರ್ಯಕ್ರಮಗಳು/ಅಂಶಗಳ ಬಗ್ಗೆ ಹಿಂದಿನ 5 ವರ್ಷಗಳ ಮಾಹಿತಿಯನ್ನು ಅಂದರೆ 2010-11, 2011-12, 2012-13, 2013-14, ಮತ್ತು 2014-15 ರ ಮಾರ್ಚ್ 31 ರ ಅಂತ್ಯದಲ್ಲಿರುವಂತೆ ಏಪ್ರಿಲ್ ತಿಂಗಳ ಪ್ರಗತಿ ವರದಿಯನ್ನು ಗ್ರಾಮ ಪಂಚಾಯತಿವಾರು, ತಾಲ್ಲೂಕು ಪಂಚಾಯತಿವಾರು, ಮತ್ತು ಜಿಲ್ಲಾಪಂಚಾಯತಿವಾರು, ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಗಳಲ್ಲಿ ಜಿಲ್ಲಾ ಪಂಚಾಯತಿ ಹಂತದಲ್ಲಿ **ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯಲ್ಲಿ** ಸಿದ್ಧಪಡಿಸಿ ಸರ್ಕಾರಕ್ಕೆ ದಿನಾಂಕ:31-08-2015 ರೊಳಗೆ ಕಳುಹಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಕೋರಿದೆ.

1) ಉಪ ಕರಗಳು
   (1) ಆರೋಗ್ಯ ಕರ
   (2) ಶಿಕ್ಷಣ ಕರ
   (3) ಭಿಕ್ಷುಕರ ಕರ
   (4) ಗ್ರಂಥಾಲಯ ಕರ
   (5) ಕಟ್ಟಡ ಕಾರ್ಮಿಕರ ಕ್ಷೇಮಾಭಿವೃದ್ಧಿ ಕರ

ಬಹುಮಹಡಿ ಕಟ್ಟಡ, 3ನೇ ಮಹಡಿ, ಬೆಂಗಳೂರು – 560 001 M.S. Building, 3rd Floor, Bangalore - 560 001
Tele : 080-2235 3925 / 2203 2533 Fax : 080-2235 3925 e-mail : pr.kar@nic.in

2) **ತೆರಿಗೆ ಬೇಡಿಕೆ ಮತ್ತು ವಸೂಲಾತಿ(DCB)**
3) **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಶೇಕಡ 25ರ ಅನುದಾನದ ಬಳಕೆ**
4) **ಮಹಿಳಾ ಉದ್ದೇಶಿತ ಅನುದಾನದ ಬಳಕೆ**
5) **(1)ಸಾಮಾನ್ಯ, (2)ಮಹಿಳಾ ಹಾಗೂ (3)ಮಕ್ಕಳ ಗ್ರಾಮ ಸಭೆ**
6) **ಜಮಾಬಂದಿ ವಿವರಗಳು.**

ಮೇಲ್ಕಂಡ ವಿಷಯಗಳನ್ನು ಉಸ್ತುವಾರಿ ಮಾಡಲು ಗ್ರಾಮ ಪಂಚಾಯತ್‌ಗಳ ವಿಷಯವನ್ನು ನೋಡಿಕೊಳ್ಳುವ ಉಪಕಾರ್ಯದರ್ಶಿಯವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲು ತಿಳಿಸಿದೆ. ಹಾಗೂ ಗ್ರಾಮ ಪಂಚಾಯತಿಗಳು ಮತ್ತು ತಾಲ್ಲೂಕ್ ಪಂಚಾಯತಿಗಳಿಂದ ತ್ವರಿತವಾಗಿ ವರದಿಯನ್ನು ತರಿಸಲು ನೆರವಾಗುವಂತೆ ಉಪಕಾರ್ಯದರ್ಶಿಗಳಿಗೆ ತಿಳಿಸುವುದು.

ಸಂಬಂಧಪಟ್ಟ ಮಾಹಿತಿಗಳು ಗ್ರಾಮ ಪಂಚಾಯತಿವಾರು, ತಾಲ್ಲೂಕು ಪಂಚಾಯತಿವಾರು ಮತ್ತು ಜಿಲ್ಲಾ ಪಂಚಾಯತಿವಾರು ಇರತಕ್ಕದ್ದು. ಒಂದು ಗ್ರಾಮ ಪಂಚಾಯತಿಗೆ ಸಂಬಂಧಪಟ್ಟಂತೆ ನಮೂನೆಗಳನ್ನು ನೀಡಲಾಗಿದ್ದು, ಆ ತಾಲ್ಲೂಕಿನಲ್ಲಿರುವ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಹಾಗೂ ಕ್ರೋಢೀಕೃತ ವರದಿಯನ್ನು ನೀಡಲು ತಿಳಿಸಿದೆ.

ಈ ವಿಷಯದಲ್ಲಿ ವರದಿನಯನ್ನು ನೀಡದೆ ನಿರ್ಲಕ್ಷ್ಯ ಮಾಡುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ತಮ್ಮ ಹಂತದಲ್ಲಿ ಶಿಸ್ತು ಕ್ರಮ ತೆಗೆದುಕೊಳ್ಳಲು ಹಾಗೂ ಉಸ್ತುವಾರಿ ಮಾಡಲು ವಿಫಲರಾಗುವ ಕಾರ್ಯನಿರ್ವಾಹಕ ಅಧಿಕಾರಿಗಳ ವಿರುದ್ಧ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಿದೆ.

**ಆದರಗಳೊಂದಿಗೆ,**

**ತಮ್ಮ ವಿಶ್ವಾಸಿ**

14/8/18

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಎಲ್ಲಾ ಜಿಲ್ಲಾ ಪಂಚಾಯತ್‌ಗಳು.

. . . . ಜಿಲ್ಲೆ

**<u>ನಮೂನೆ–1(ಎ)</u>**

**ಉಪಕರಗಳು**

. . . . ಗ್ರಾಮ ಪಂಚಾಯತಿ . . . . . ತಾಲ್ಲೂಕು

| | ವಸೂಲಾತಿ ಮೊತ್ತ – (ರೂಗಳಲ್ಲಿ) | | ಜಮಾ ವಿವರ | | |
|---|---|---|---|---|---|
| | ವರ್ಷ | 2010–11 | ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿದ ಮೊತ್ತ | ಬಾಕಿ | ಷರಾ |
| 1 | ಆರೋಗ್ಯ | | | | |
| 2 | ಶಿಕ್ಷಣ | | | | |
| 3 | ಭಿಕ್ಷುಕರ | | | | |
| 4 | ಗ್ರಂಥಾಲಯ | | | | |
| 5 | ಕಟ್ಟಡ ಕಾರ್ಮಿಕರ ಕ್ಷೇಮಾಭಿವೃದ್ಧಿ | | | | |

. . . . ಜಿಲ್ಲೆ

**<u>ನಮೂನೆ–1(ಬಿ)</u>**

**<u>ಉಪಕರಗಳು</u>**

. . . . ಗ್ರಾಮ ಪಂಚಾಯತಿ . . . . . ತಾಲ್ಲೂಕು

| | ವಸೂಲಾತಿ ಮೊತ್ತ – (ರೂಗಳಲ್ಲಿ) | | ಜಮಾ ವಿವರ | | |
|---|---|---|---|---|---|
| 1 | ವರ್ಷ | 2011–12 | ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿದ ಮೊತ್ತ | ಬಾಕಿ | ಷರಾ |
| 2 | ಆರೋಗ್ಯ | | | | |
| 3 | ಶಿಕ್ಷಣ | | | | |
| 4 | ಭಿಕ್ಷುಕರ | | | | |
| 5 | ಗ್ರಂಥಾಲಯ | | | | |
| 6 | ಕಟ್ಟಡ ಕಾರ್ಮಿಕರ ಕ್ಷೇಮಾಭಿವೃದ್ಧಿ | | | | |

. . . . ಜಿಲ್ಲೆ

**<u>ನಮೂನೆ–1(ಸಿ)</u>**

**<u>ಉಪಕರಗಳು</u>**

. . . . ಗ್ರಾಮ ಪಂಚಾಯತಿ . . . . . ತಾಲ್ಲೂಕು

| | ವಸೂಲಾತಿ ಮೊತ್ತ – (ರೂಗಳಲ್ಲಿ) | | ಜಮಾ ವಿವರ | | |
|---|---|---|---|---|---|
| 1 | ವರ್ಷ | 2012–13 | ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿದ ಮೊತ್ತ | ಬಾಕಿ | ಷರಾ |
| 2 | ಆರೋಗ್ಯ | | | | |
| 3 | ಶಿಕ್ಷಣ | | | | |
| 4 | ಭಿಕ್ಷುಕರ | | | | |
| 5 | ಗ್ರಂಥಾಲಯ | | | | |
| 6 | ಕಟ್ಟಡ ಕಾರ್ಮಿಕರ ಕ್ಷೇಮಾಭಿವೃದ್ಧಿ | | | | |

. . . . ಜಿಲ್ಲೆ

**<u>ನಮೂನೆ–1(ಡಿ)</u>**

**<u>ಉಪಕರಗಳು</u>**

. . . . ಗ್ರಾಮ ಪಂಚಾಯತಿ . . . . . ತಾಲ್ಲೂಕು

| | ವಸೂಲಾತಿ ಮೊತ್ತ – (ರೂಗಳಲ್ಲಿ) | | ಜಮಾ ವಿವರ | | |
|---|---|---|---|---|---|
| 1 | ವರ್ಷ | 2013–14 | ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿದ ಮೊತ್ತ | ಬಾಕಿ | ಷರಾ |
| 2 | ಆರೋಗ್ಯ | | | | |
| 3 | ಶಿಕ್ಷಣ | | | | |
| 4 | ಭಿಕ್ಷುಕರ | | | | |
| 5 | ಗ್ರಂಥಾಲಯ | | | | |
| 6 | ಕಟ್ಟಡ ಕಾರ್ಮಿಕರ ಕ್ಷೇಮಾಭಿವೃದ್ಧಿ | | | | |

. . . . ಜಿಲ್ಲೆ

**ನಮೂನೆ–1(ಇ)**

**ಉಪಕರಗಳು**

. . . . ಗ್ರಾಮ ಪಂಚಾಯತಿ . . . . . ತಾಲ್ಲೂಕು

| | ವಸೂಲಾತಿ ಮೊತ್ತ – (ರೂಗಳಲ್ಲಿ) | | ಜಮಾ ವಿವರ | | |
|---|---|---|---|---|---|
| 1 | ವರ್ಷ | 2014–15 | ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿದ ಮೊತ್ತ | ಬಾಕಿ | ಷರಾ |
| 2 | ಆರೋಗ್ಯ | | | | |
| 3 | ಶಿಕ್ಷಣ | | | | |
| 4 | ಭಿಕ್ಷುಕರ | | | | |
| 5 | ಗ್ರಂಥಾಲಯ | | | | |
| 6 | ಕಟ್ಟಡ ಕಾರ್ಮಿಕರ ಕ್ಷೇಮಾಭಿವೃದ್ಧಿ | | | | |

. . . . ಜಿಲ್ಲೆ

**ನಮೂನೆ–2**

**ಆಸ್ತಿ ತೆರಿಗೆ ಬೇಡಿಕೆ ಮತ್ತು ವಸೂಲಾತಿ(DCB)**

. . . . ಗ್ರಾಮ ಪಂಚಾಯತಿ . . . . . ತಾಲ್ಲೂಕು

| ತೆರಿಗೆ ಬೇಡಿಕೆ ಮತ್ತು ವಸೂಲಾತಿ(DCB)(ಲಕ್ಷ ರೂಗಳಲ್ಲಿ) | | | | |
|---|---|---|---|---|
| ವರ್ಷ | ಬೇಡಿಕೆ | ವಸೂಲಾತಿ | ಬಾಕಿ | ಷರಾ |
| 2010–11 | | | | |
| 2011–12 | | | | |
| 2012–13 | | | | |
| 2013–14 | | | | |
| 2014–15 | | | | |
| ಒಟ್ಟು | | | | |

. . . . ಜಿಲ್ಲೆ

**ನಮೂನೆ–3**

**ನೀರಿನ ತೆರಿಗೆ ಬೇಡಿಕೆ ಮತ್ತು ವಸೂಲಾತಿ(DCB)**

. . . . ಗ್ರಾಮ ಪಂಚಾಯತಿ . . . . . ತಾಲ್ಲೂಕು

| ತೆರಿಗೆ ಬೇಡಿಕೆ ಮತ್ತು ವಸೂಲಾತಿ(DCB)(ಲಕ್ಷ ರೂಗಳಲ್ಲಿ) | | | | |
|---|---|---|---|---|
| ವರ್ಷ | ಬೇಡಿಕೆ | ವಸೂಲಾತಿ | ಬಾಕಿ | ಷರಾ |
| 2010–11 | | | | |
| 2011–12 | | | | |
| 2012–13 | | | | |
| 2013–14 | | | | |
| 2014–15 | | | | |
| ಒಟ್ಟು | | | | |

. . . . ಜಿಲ್ಲೆ

**ನಮೂನೆ–4**

**ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಶೇಕಡ 25ರ ಅನುದಾನದ ಬಳಕೆ**

. . . . ಗ್ರಾಮ ಪಂಚಾಯತಿ . . . . . ತಾಲ್ಲೂಕು

| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಶೇಕಡ 25ರ ಅನುದಾನದ ಬಳಕೆ(ಲಕ್ಷ ರೂಗಳಲ್ಲಿ) | | | | |
|---|---|---|---|---|
| ವರ್ಷ | ನಿಗದಿ ಪಡಿಸಿದ ಅನುದಾನ | ಖರ್ಚಾದ ಅನುದಾನ | ಬಾಕಿ | ಷರಾ |
| 2010–11 | | | | |
| 2011–12 | | | | |
| 2012–13 | | | | |
| 2013–14 | | | | |
| 2014–15 | | | | |
| ಒಟ್ಟು | | | | |

. . . . ಜಿಲ್ಲೆ

**ನಮೂನೆ–5**

**ಮಹಿಳಾ ಉದ್ದೇಶಿತ ಅನುದಾನದ ಬಳಕೆ**

. . . . ಗ್ರಾಮ ಪಂಚಾಯತಿ . . . . . ತಾಲ್ಲೂಕು

| ಮಹಿಳಾ ಉದ್ದೇಶಿತ ಅನುದಾನದ ಬಳಕೆ (ಲಕ್ಷ ರೂಗಳಲ್ಲಿ) | | | | |
|---|---|---|---|---|
| ವರ್ಷ | ನಿಗದಿ ಪಡಿಸಿದ ಅನುದಾನ | ಖರ್ಚಾದ ಅನುದಾನ | ಬಾಕಿ | ಷರಾ |
| **2010–11** | | | | |
| **2011–12** | | | | |
| **2012–13** | | | | |
| **2013–14** | | | | |
| **2014–15** | | | | |
| ಒಟ್ಟು | | | | |

. . . . ಜಿಲ್ಲೆ

**ನಮೂನೆ–6**

**1) ಸಾಮಾನ್ಯ, 2) ಮಹಿಳಾ ಹಾಗೂ 3)ಮಕ್ಕಳ ಗ್ರಾಮ ಸಭೆ**

. . . . ಗ್ರಾಮ ಪಂಚಾಯತಿ . . . . . ತಾಲ್ಲೂಕು

| ಸಾಮಾನ್ಯ ಗ್ರಾಮ ಸಭೆ | | | | ಮಹಿಳಾ ಗ್ರಾಮ ಸಭೆ | | | ಮಕ್ಕಳ ಗ್ರಾಮ ಸಭೆ | | |
|---|---|---|---|---|---|---|---|---|---|
| ವರ್ಷ | ನಿಗದಿ ಪಡಿಸಿದ ಸಭೆಗಳ ಸಂಖ್ಯೆ | ನಡೆಸಲಾದ ಸಭೆಗಳ ಸಂಖ್ಯೆ | ಷರಾ | ನಿಗದಿ ಪಡಿಸಿದ ಸಭೆಗಳ ಸಂಖ್ಯೆ | ನಡೆಸಲಾದ ಸಭೆಗಳ ಸಂಖ್ಯೆ | ಷರಾ | ನಿಗದಿ ಪಡಿಸಿದ ಸಭೆಗಳ ಸಂಖ್ಯೆ | ನಡೆಸಲಾದ ಸಭೆಗಳ ಸಂಖ್ಯೆ | ಷರಾ |
| **2010–11** | | | | | | | | | |
| **2011–12** | | | | | | | | | |
| **2012–13** | | | | | | | | | |
| **2013–14** | | | | | | | | | |
| **2014–15** | | | | | | | | | |
| ಒಟ್ಟು | | | | | | | | | |

. . . . ಜಿಲ್ಲೆ

<u>ನಮೂನೆ–7</u>

<u>ಜಮಾಬಂದಿ</u>

| ಜಮಾಬಂದಿ | | | | | |
|---|---|---|---|---|---|
| ವರ್ಷ | ನಿಗದಿ ಪಡಿಸಿದ ಜಮಾಬಂದಿ ಸಂಖ್ಯೆ | ನಡೆಸಲಾದ ಜಮಾಬಂದಿ ಸಂಖ್ಯೆ | ಪರಿಶೋಧನೆ ಮಾಡಿದ ಜಮಾಬಂದಿ ಸಂಖ್ಯೆ | ಕ್ರಮ ತೆಗೆದುಕೊಂಡ ವರದಿ | ಷರಾ |
| **2010–11** | | | | | |
| **2011–12** | | | | | |
| **2012–13** | | | | | |
| **2013–14** | | | | | |
| **2014–15** | | | | | |
| ಒಟ್ಟು | | | | | |